# ಕೂಡಲಸಂಗಮದ ಸಂಗಮೇಶ್ವರ ದೇವಾಲಯ: ಒಂದು ವಿಶ್ಲೇಷಣೆ

**ಆದಪ್ಪ ಮ. ಗೊರಚಿಕ್ಕನವರ**

ಇತಿಹಾಸ ಉಪನ್ಯಾಸಕರು, ಶ್ರೀ. ಪಿ. ಎಸ್. ಸಜ್ಜನ ಕಲಾ ಮಹಾವಿದ್ಯಾಲಯ, ಬೇವೂರ.

DOI: https://doi.org/10.5281/zenodo.18008516

## ABSTRACT:

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಐತಿಹಾಸಿಕ, ಧಾರ್ಮಿಕ ಹಾಗೂ ಬಸವೇಶ್ವರನ ಐಕ್ಯಸ್ಥಳವಾದ ಕೂಡಲಸಂಗಮವು ಕೃಷ್ಣೆ, ಮಲಪ್ರಭೆ ನದಿಗಳ ಸಂಗಮ ತಾಣವಾಗಿದ್ದು ತನ್ನದೇ ಆದ ಪಾವಿತ್ರತೆಯನ್ನು ಉಳಿಸಿಕೊಂಡು ಬೆಳೆದು ಬಂದ ಪ್ರದೇಶವಾಗಿದೆ. ಬಸವೇಶ್ವರರು ಅಧ್ಯಯನ ಮಾಡಿದ ಹಾಗೂ ಐಕ್ಯವಾದ ಸ್ಥಳ ಇದಾಗಿದ್ದು ಇಲ್ಲಿರುವ ಕಲ್ಯಾಣದ ಚಾಲುಕ್ಯರ ಶೈಲಿಯ ಸುಂದರವಾದ ದೇವಾಲಯವೇ ಸಂಗಮೇಶ್ವರ ದೇವಾಲಯ. ಈ ದೇವಾಲಯದ ಸಮಗ್ರವಾದ ಮಾಹಿತಿಯನ್ನು ತಿಳಿಸಿಕೊಡುವುದೇ ಈ ಲೇಖನದ ಉದ್ದೇಶ.

## KEYWORDS:

ಕೂಡಲಸಂಗಮೇಶ್ವರ, ಕಪ್ಪಡಿ, ಲಿಂಗೈಕ್ಯ, ವಚನಚಳುವಳಿ, ಕೃಷ್ಣೆ ಮತ್ತು ಮಲಪ್ರಭೆ ನದಿಗಳು.

### ಪ್ರಸ್ತಾವನೆ:

ಕಪ್ಪಡಿ ಸಂಗಮವೆಂದು ಕರೆಯಲ್ಪಡುವ ಕೂಡಲಸಂಗಮ ದೇವಾಲಯದ ಪ್ರಾಚೀನತೆ ಬಗ್ಗೆ ನೋಡುವಾಗ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯವೆಂದು ತಿಳಿದುಬರುತ್ತದೆ. ದೇವಾಲಯದಲ್ಲಿನ ಕೆಲವು ಶಿಲ್ಪಗಳು, ಕಂಬಗಳು ಸೇರಿದಂತೆ ಕೆಲವು ಅಂಶಗಳು ದೇವಾಲಯದ ಪ್ರಾಚೀನತೆಯನ್ನು ಗುರುತಿಸಲು ನೆರವಾಗುತ್ತವೆ. ಜನಪದ ಸಾಹಿತ್ಯ, ಶಾಸನಗಳ ವಿವರಣೆಗಳು, ಅನೇಕ ಕವಿಗಳ ಬರವಣಿಗೆಗಳು ಕೂಡಲಸಂಗಮದ ಸಂಗಮೇಶ್ವರ ದೇವಾಲಯದ ಕುರಿತು ಉಲ್ಲೇಖವನ್ನು ಒದಗಿಸುತ್ತವೆ. ಅಂತಾರಾಷ್ಟ್ರೀಯ ಪ್ರವಾಸಿ ತಾಣವಾಗಿ ಬೆಳೆದ ಕೂಡಲಸಂಗಮದ ಐತಿಹಾಸಿಕ ಸ್ಥಳಗಳ ಪೈಕಿ ಸಂಗಮೇಶ್ವರ ದೇವಾಲಯವು ಒಂದಾಗಿದ್ದು, ದೇವಾಲಯದ ಹಿನ್ನೆಲೆಯಲ್ಲಿ ಚಾರಿತ್ರಿಕ ಸಂಗತಿಗಳನ್ನು ಅವಲೋಕಿಸುವಾಗ ಸಾಂಸ್ಕೃತಿಕ ನೆಲೆಯಲ್ಲಿ ಮಹತ್ವದ ಅಂಶಗಳು ಕಂಡುಬರುತ್ತವೆ. ಪ್ರಸ್ತುತ ಲೇಖನದಲ್ಲಿ ಕೂಡಲಸಂಗಮದ ಸಂಗಮೇಶ್ವರ ದೇವಾಲಯದ ಬಗ್ಗೆ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

### ವಿಷಯ ವಿಶ್ಲೇಷಣೆ:

ಅಂತಾರಾಷ್ಟ್ರೀಯ ಪ್ರವಾಸಿ ತಾಣವೆನಿಸಿದ ಕೂಡಲಸಂಗಮದಲ್ಲಿ ಇರುವ ಸಂಗಮೇಶ್ವರ ದೇವಾಲಯವು ಪ್ರಾಚೀನ ದೇವಾಲಯವಾಗಿದೆ. ಶಾಸನೋಕ್ತ ಉಲ್ಲೇಖದ ಆಧಾರದಲ್ಲಿ ಗಮನಿಸುವುದಾದರೆ ಕ್ರಿ.ಶ. 1160ರ ಶಾಸನವೊಂದರಲ್ಲಿ ಸಂಗಮೇಶ್ವರ ಹಾಗೂ ಕಾಳೇಶ್ವರ, ಆಚೇಶ್ವರ ದೇವಾಲಯಗಳ ಉಲ್ಲೇಖವನ್ನು ಕಾಣುತ್ತೇವೆ. ಶೈವರ ಪ್ರಸಿದ್ಧ ತಾಣವಾಗಿದ್ದ ಈ ಕ್ಷೇತ್ರ ಹಾಗೂ ಕ್ಷೇತ್ರದ ಆರಾಧ್ಯ ದೈವದ ಕುರಿತಾದ ಅನೇಕ ಕಾವ್ಯಗಳನ್ನು, ಸಾಹಿತ್ಯಿಕ ಆಧಾರಗಳನ್ನು ಕಾಣುತ್ತೇವೆ. 12ನೇ ಶತಮಾನದ ಮಹಾಮಾನವತಾವಾದಿ, ವಿಶ್ವಗುರು ಬಸವಣ್ಣನವರ ಆರಾಧ್ಯ ದೈವ ಕೂಡಲಸಂಗಮನಾಥನಾಗಿದ್ದು, ಅವರ ವಚನಾಂಕಿತ 'ಕೂಡಲಸಂಗಮದೇವ' ಆಗಿದೆ. ಕೂಡಲಸಂಗಮನಾಥ ದೇವಾಲಯವು ಅನೇಕ

ವಿಶೇಷತೆಗಳನ್ನು ಒಳಗೊಂಡಿದೆ. ಸ್ಥಳೀಯವಾಗಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಅನೇಕ ಐತಿಹ್ಯಗಳು, ಪಾರಂಪರಿಕ ನಂಬಿಕೆ, ಆಚರಣೆಗಳು ಇರುವುದು ಕಂಡುಬರುತ್ತದೆ. ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಆಗಮಿಸುವ ಭಕ್ತರು ದೇವಾಲಯದ ವಾಸ್ತುಶಿಲ್ಪ, ಅಲಂಕಾರಿಕ ಕೆತ್ತನೆ ಹಾಗೂ ಗರ್ಭಗುಡಿಯ ಸಂಗಮನಾಥನನ್ನು ಕಂಡು ಭಕ್ತಿ, ಭಾವವನ್ನು ಹೊಂದುತ್ತಾರೆ. ಸಂಗಮನಾಥನ ದೇವಾಲಯದ ಹಿನ್ನೆಲೆಯಲ್ಲಿ ಅವಲೋಕಿಸುವುದಾದರೆ ಅನೇಕ ಮಹತ್ವದ ಸಂಗತಿಗಳು ಕಂಡುಬರುತ್ತವೆ.

**ಜನಪದ ಸಾಹಿತ್ಯದಲ್ಲಿ ಉಲ್ಲೇಖ:**

**ಹೊತ್ತು ಮುಳುಗಿದರೇನ, ಕತ್ತಲಾದರೇನ**
**ತಪ್ಪದಲಿ ಗುಡಿಗೆ ಬರುವೆನು । ಸಂಗಯ್ಯ**
**ಮುತ್ತಿನ ಬಾಗಿಲ ತೆಗೆದೀರೋ ॥**
**ಕೂಡಲಸಂಗಯ್ಯ ಹೊಳಿಯಾಗ ಹೆಂಗಿದ್ದಿ**
**ಹರಳೊತ್ತಿ ಸಣ್ಣ ಮಳಲೊತ್ತಿ । ಗಂಗೆಯ**
**ಜಲವೊತ್ತಿ ಲಿಂಗ ನೆನದಾನ ॥**

ಸಂಗಮೇಶ್ವರನ ಹಾಗೂ ದೇವಾಲಯದ ಉಲ್ಲೇಖವಿರುವ ಅನೇಕ ಜನಪದ ತ್ರಿಪದಿಗಳನ್ನು ಕಾಣುತ್ತೇವೆ. ಈ ಭಾಗದ ಜನರ ಧಾರ್ಮಿಕ ಭಾವನೆಗಳನ್ನು, ಭಕ್ತಿಯ ಸಂಗತಿಗಳನ್ನು ಇಲ್ಲಿ ಕಾಣುತ್ತೇವೆ. ಅಂತೆಯೇ ಸಂಗಮನಾಥನನ್ನು ಕೂಡಲಸಂಗಯ್ಯ, ಕಪ್ಪಡಿ ಸಂಗಯ್ಯ, ಸಂಗಮದೇವ, ಸಂಗಮನಾಥ, ಸಂಗಯ್ಯ, ಕೂಡಲಸಂಗಪ್ಪ, ಸಂಗಮೇಶ್ವರ ಮುಂತಾದ ಹೆಸರುಗಳಿಂದ ಭಕ್ತರು ಕರೆಯುತ್ತಾ ಬಂದಿರುವುದನ್ನು ಕಾಣುತ್ತೇವೆ.

**ಸಂಗಮೇಶ್ವರ ದೇವಾಲಯದ ಪ್ರಾಚೀನತೆ:**

ಕಪ್ಪಡಿ ಸಂಗಮವೆಂದು ಕರೆಯಲ್ಪಡುವ ಕೂಡಲಸಂಗಮ ದೇವಾಲಯದ ಪ್ರಾಚೀನತೆ ಬಗ್ಗೆ ನೋಡುವಾಗ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯವೆಂದು ತಿಳಿದುಬರುತ್ತದೆ. ಒಂದು ಅಂದಾಜಿನ ಅನ್ವಯ 11ನೇ ಶತಮಾನಕ್ಕಿಂತಲೂ ಪೂರ್ವದಲ್ಲಿ ಈ ದೇವಾಲಯ ಇರಲಾಗಿತ್ತೆಂದು; ಇದು ಕಾಲಾಂತರದಲ್ಲಿ ವಿವಿಧ ಮಾರ್ಪಾಡುಗಳನ್ನು ಕಾಣುತ್ತಾ ಜೀರ್ಣೋದ್ಧಾರ ಹೊಂದಿದ ದೇವಸ್ಥಾನವಾಗಿದೆ. ಕೂಡಲಸಂಗಮ ದೇವಾಲಯಕ್ಕೆ ಸಮೀಪದ ಬೆಳಗಲ್ ಗ್ರಾಮದ ಕಲ್ಲುಗಳನ್ನು ಬಳಸಿಕಟ್ಟಿದ್ದಾರೆ. ಇಂದಿಗೂ ಆ ಗ್ರಾಮದ ಬಂಡೆಯೊಂದರಲ್ಲಿ ದೇವಾಲಯದ ನಕ್ಷೆ ಇರಲಾಗಿದ್ದು, ಅಲ್ಲಿಯೇ ಕಲ್ಲುಗಳನ್ನು ಕಟೆದು ತೆಪ್ಪದ ಮೂಲಕ ಸಾಗಿಸಿರುವ ಸಾಧ್ಯತೆಗಳಿವೆ. ಕ್ಷೇತ್ರದ ಕುರಿತಾಗಿ ಮಾಹಿತಿ ನೀಡುವ ಅನೇಕ ಕೃತಿಗಳಲ್ಲಿ ಈ ದೇವಾಲಯವನ್ನು ದ್ಯಾವನಾಯಕನೆಂಬುವನು ಕಟ್ಟಿಸಿದ್ದಾನೆ ಎಂಬ ವಿವರಣೆಯನ್ನು ಕಾಣುತ್ತೇವೆ. ದೇವಾಲಯದಲ್ಲಿನ ಕೆಲವು ಶಿಲ್ಪಗಳು, ಕಂಬಗಳು ಸೇರಿದಂತೆ ಕೆಲವು ಅಂಶಗಳು ದೇವಾಲಯದ ಪ್ರಾಚೀನತೆಯನ್ನು ಗುರುತಿಸಲು ನೆರವಾಗುತ್ತವೆ.

**ಗರ್ಭಗುಡಿ:**

ಗರ್ಭಗುಡಿಯು ಚೌಕಾಕಾರದಲ್ಲಿ ಇರಲಾಗಿದೆ. ಗರ್ಭಗುಡಿಯಲ್ಲಿ ಸಂಗಮೇಶ್ವರ ಉದ್ಭವಲಿಂಗ ಇರಲಾಗಿದೆ. ಶಿವಲಿಂಗಕ್ಕೆ ಸುತ್ತಲೂ ಪಾಣಿಪೀಠವೊಂದು ಇರಲಾಗಿದೆ. ಸ್ಥಳೀಯರು ಹೇಳುವ ಪ್ರಕಾರ ಈ ಪಾನಬಟ್ಟಲದಲ್ಲಿ ನೀರು ಸದಾಕಾಲ ಇರಲಾಗುತ್ತಿತ್ತೆಂದು, ಅದು ಸಮೃದ್ಧಿಯ ಸಂಕೇತವೆಂದು ನಂಬಿರುವರು. ಪಾನಬಟ್ಟಲದ ನೀರು ಬತ್ತಿದರೆ ಕೇಡಾಗುವುದು, ಬರಗಾಲ ಬೀಳುವುದೆಂದು ಸಹ ಹೇಳುವರು. ಗರ್ಭಗುಡಿಯಲ್ಲಿ ಕಪ್ಪುಶಿಲೆಯಲ್ಲಿ ನಿರ್ಮಾಣವಾದ ಗಣಪತಿ ವಿಗ್ರಹ ಇರಲಾಗಿದ್ದು, ಉತ್ತರ ಭಾಗದಲ್ಲಿ

ಇದನ್ನು ಕಾಣುತ್ತೇವೆ. ಅದೇ ರೀತಿ ಸಂಗಮೇಶ್ವರ ಲಿಂಗದ ಹಿಂಬದಿಯಲ್ಲಿ ಪ್ರಭುದೇವರ ಮೂರ್ತಿಯೊಂದು ಇರಲಾಗಿದ್ದು, ಅನೇಕರು ಇದನ್ನು ವೀರಭದ್ರನ ಮೂರ್ತಿಯೆಂದು ಸಹ ಹೇಳುವರು. ನಟರಾಜನ ಮೂರ್ತಿಯ ಹೋಲಿಕೆ ಇರಲಾಗಿದೆ. ಈ ಮೂರ್ತಿಯ ಎಡ-ಬಲದಲ್ಲಿ ಬೆಳ್ಳಿಯ ಗದೆ, ತ್ರಿಶೂಲಗಳು ಇರಲಾಗಿವೆ. ಈ ಮೂರ್ತಿಯ ಪೀಠದ ಅಡಿಯಲ್ಲಿ ಎಂಟು ಅಕ್ಷರಗಳ ಶಾಸನವೊಂದು ಇರಲಾಗಿದೆ. ಸಂಗಮನಾಥನ ಶಿವಲಿಂಗವಿರುವ ಪಾನಬಟ್ಟಲು ಸಂಪೂರ್ಣ ಬೆಳ್ಳಿಯ ಕವಚದಿಂದ ಆವೃತವಾಗಿದೆ. ಸಂಗಮೇಶ್ವರ ಲಿಂಗಕ್ಕೆ ಬೆಳ್ಳಿಯ ಮುಖವಾಡ ಇರಲಾಗಿದ್ದು ದಿವ್ಯತೇಜಸ್ಸನ್ನು ಹೊಂದಿದೆ. ಗರ್ಭಗುಡಿಯ ಬಾಗಿಲು ತೇಗದ ಮರದ ಕಟ್ಟಿಗೆಯಿಂದ ಕೂಡಿದ್ದು, ಬಾಗಿಲ ಚೌಕಟ್ಟಿಗೆ ಬೆಳ್ಳಿಯ ಚಿತ್ತಾರದ ಫಲಕವನ್ನು ಜೋಡಿಸಲಾಗಿದೆ. ಗರ್ಭಗುಡಿಯಲ್ಲಿ ನಂದಾದೀವಿಗೆಗಳು ನಿರಂತರ ಬೆಳಗುತ್ತಿರುತ್ತವೆ. ಗೋಡೆ ಹಾಗೂ ನೆಲಹಾಸು ಅಂದವಾಗಿ ಕಾಣಲು ಗ್ರಾನೈಟ್ ಬಳಸಿದ್ದು ಮೂಲ ಸ್ವರೂಪವನ್ನು ರಕ್ಷಿಸಿಕೊಂಡು ಬರಲಾಗಿದೆ.

**ಅಂತರಾಳ, ರಂಗಮಂಟಪ, ಹೊರಭಾಗ:**

ಗರ್ಭಗುಡಿಯ ದ್ವಾರಬಾಗಿಲು ವಿಸ್ತಾರವಾಗಿದ್ದು, ಇಲ್ಲಿನ ಸೂಕ್ಷ್ಮ ಶಿಲಾಕೆತ್ತನೆಗಳು ಬಳ್ಳಿಗಳ ಸ್ವರೂಪದ ಚಿತ್ತಾಕರ್ಷಣೆಯನ್ನು ಹೊಂದಿವೆ. ದ್ವಾರಪಾಲಕರ ವಿಗ್ರಹಗಳು ಭಿನ್ನಗೊಂಡಿದ್ದು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ಅಂತರಾಳದ ಗಾತ್ರ ಗರ್ಭಗುಡಿಗಿಂತ ಚಿಕ್ಕದಾಗಿದೆ. ಇಲ್ಲಿನ ಎರಡು ಕಂಬಗಳ ಮೇಲೆ ಇರಲಾದ ಮಕರತೋರಣ ಆಕರ್ಷಕವಾಗಿದೆ. ಇದಕ್ಕೆ ಹೊಂದಿಕೊಂಡಂತೆ ಇರಲಾದ ದೇವಕೋಷ್ಟಕದಲ್ಲಿ ಬಸವಣ್ಣ ಹಾಗೂ ನೀಲಾಂಬಿಕೆಯವರ ಕಪ್ಪುಶಿಲಾಮೂರ್ತಿಗಳು ಇರಲಾಗಿವೆ. ಉತ್ತರ ಬಾಗಿಲಿಗೆ ಅಭಿಮುಖವಾಗಿರುವ ಸ್ಥಳದಲ್ಲಿ ಕೆಲವು ಧಾರ್ಮಿಕ ಕಾರ್ಯಗಳು ಜರುಗುತ್ತವೆ. ದೇವಾಲಯದಲ್ಲಿನ ನವರಂಗದ ನಾಲ್ಕು ಬೃಹತ್ ಕಂಬಗಳು ನುಣುಪಾಗಿದ್ದು ಸೂಕ್ಷ್ಮ ಕಲಾ ಕೆತ್ತನೆಗಳನ್ನು ಕಾಣುತ್ತೇವೆ. ಇಲ್ಲಿ ನಡುವೆ ಇರಲಾದ ಜೋಡಿ ನಂದಿವಿಗ್ರಹಗಳು ಶಿವಲಿಂಗಕ್ಕೆ ಅಭಿಮುಖವಾಗಿ ಇರಲಾಗಿವೆ. ಈ ಬಗೆಯ ಜೋಡಿ ಲಿಂಗಗಳು ಇರುವುದು ಅಪರೂಪವಾಗಿ ಕಂಡುಬರುತ್ತದೆ. ಒಂದು ಸಾಂಪ್ರದಾಯಿಕ ವೃಷಭವಾದರೆ ಇನ್ನೊಂದು ಬಸವಣ್ಣನವರ ಐಕ್ಯದ ಕುರುಹಾಗಿ ಈ ನಂದಿ ಇರಬಹುದೆಂದು ಅನೇಕರು ಹೇಳುತ್ತಾರೆ. ಕೆಲವರು ಬಸವಣ್ಣ ಹಾಗೂ ಚೆನ್ನಬಸವಣ್ಣನವರ ಪ್ರತೀಕ ಈ ಎರಡು ನಂದಿವಿಗ್ರಹಗಳೆನ್ನುವರು. ಈ ರಂಗಮಂಟಪದಲ್ಲಿ ಮದುವೆ, ಜವಳ ಇತ್ಯಾದಿ ಶುಭಕಾರ್ಯಗಳು ಜರುಗುತ್ತವೆ. ದೇವಾಲಯದ ಪೂರ್ವ ಬಾಗಿಲು ಗರ್ಭಗುಡಿ ಬಾಗಿಲಿಗಿಂತ ಕಿರಿದಾಗಿದ್ದು ಕಲ್ಲಿನಿಂದ ನಿರ್ಮಿತವಾದ ಹೊಸ್ತಿಲು ಅಗಲವಾಗಿದೆ. ಗಜಲಕ್ಷ್ಮಿ ಶಿಲ್ಪ ಮೇಲ್ಭಾಗದಲ್ಲಿ ಇರಲಾಗಿದೆ. ಇಲ್ಲಿನ ಕೆತ್ತನೆ, ಎಡ ಬಲ ಬದಿಯ ಶಿಲ್ಪಗಳು ವಿಶೇಷವಾಗಿ ಕಂಡುಬರುತ್ತವೆ. ಹೊರಬಿತ್ತಿಗೆ ಹೊಂದಿಕೊಂಡಂತೆ ಇರಲಾದ ದೇವಕೋಷ್ಟಕಗಳಲ್ಲಿ ನಂದಿಬಸವಣ್ಣ, ಗಣಪತಿ ವಿಗ್ರಹಗಳನ್ನು ಕಾಣುತ್ತೇವೆ. ಮುಖ್ಯ ದ್ವಾರ ಹಾಗೂ ಉತ್ತರ ಬಾಗಿಲಿನ ಹೊರ ಆವರಣದ ಎಡ ಬಲ ಮಂಟಪಗಳ ಹೊರ ಭಾಗದಲ್ಲಿ ಅನೇಕ ಶಿಲ್ಪಗಳನ್ನು ಕಾಣುತ್ತೇವೆ. ಹಾವಾಡಿಗ, ಮಿಥುನ ಶಿಲ್ಪ, ಬೇಟೆ, ಪ್ರಾಣಿ, ಪಕ್ಷಿಗಳು ಇರುವುದನ್ನು ಕಾಣುತ್ತೇವೆ. ಮುಂಭಾಗದ ಎರಡು ಆನೆಯ ವಿಗ್ರಹಗಳು ದೇವಾಲಯಕ್ಕೆ ವಿಶೇಷ ಕಲಾ ಮೆರಗನ್ನು ತಂದು ಕೊಟ್ಟಿವೆ. ಪ್ರಸ್ತುತ ಇರುವ ದೇವಾಲಯದ ಮುಖ್ಯ ಗೋಪುರ ಹಾಗೂ ಇತರ ಕಿರುಗೋಪುರಗಳು ಜೀರ್ಣೋದ್ಧಾರದ ಸಂದರ್ಭಗಳಲ್ಲಿ ಹೊಸ ವಿನ್ಯಾಸವನ್ನು ಪಡೆದುಕೊಂಡಿವೆ. ಕಿರುಗೋಪುರಗಳ ಮೇಲೆ ಸಣ್ಣದಾದ ಕಳಶಗಳಿವೆ. ಮುಖ್ಯಗೋಪುರದ ಮೇಲೆ ಸ್ವರ್ಣ ಲೇಪಿತ ಗೋಪುರ ಕಲಶವನ್ನು ಕಾಣುತ್ತೇವೆ. ಜನತೆ

ಪ್ರದಕ್ಷಿಣೆ ಹಾಕಲು ಅನುಕೂಲ ಇರಲಾಗಿದ್ದು ಇದಕ್ಕೆ ಕಟಾಂಜನವನ್ನು ಹಾಕಲಾಗಿದೆ. ಗಾರೆ, ಗಚ್ಚು, ಕಲ್ಲು ಬಳಕೆ ಸೇರಿದಂತೆ ಆಧುನಿಕ ಸೌಲಭ್ಯದ ಅನೇಕ ವಸ್ತುಗಳನ್ನು ಉಪಯೋಗಿಸಿಕೊಂಡು ದೇವಾಲಯದ ಕಟ್ಟಡ ಮರುನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಮುಖ್ಯ ಬಾಗಿಲಿನ ಸಮೀಪದ ಮೇಲೆ ಕಟ್ಟಲಾಗುತ್ತಿದ್ದ ಬೃಹತ್ ಘಂಟೆಯೊಂದು ಕೆಳದಿ ಅರಸರ ಕಾಲದ ಘಂಟೆಯಾಗಿದ್ದು ಕ್ಷೇತ್ರದೊಟ್ಟಿಗೆ ಅವರು ಹೊಂದಿದ ಧಾರ್ಮಿಕ ಸಂಬಂಧವನ್ನು ಪ್ರತಿನಿಧಿಸುತ್ತದೆ. ಬಿರುಕುಗೊಂಡ ಕಾರಣ ಈ ಘಂಟೆಯನ್ನು ತೆಗೆದು ಅದರ ಸ್ಥಾನದಲ್ಲಿ ಸಣ್ಣ ಘಂಟೆಯೊಂದನ್ನು ಕಟ್ಟಲಾಗಿದೆ. ಉತ್ತರ ಬಾಗಿಲಿನ ಅಲಂಕಾರಿಕ ಕೆತ್ತನೆ ವಿಶೇಷವಾಗಿದೆ. ಭಕ್ತರು ಪೂರ್ವ ಬಾಗಿಲಿನಿಂದ ಆಗಮಿಸಿ ಈ ಉತ್ತರ ಬಾಗಿಲಿನ ಮೂಲಕ ಹೊರಗೆ ನಿರ್ಗಮಿಸುವರು.

**ಕೂಡಲಸಂಗಮ ದೇವಾಲಯ ಪುನರ್ ನಿರ್ಮಾಣ:**

ನಾರಾಯಣಪುರ ಬಸವ ಸಾಗರ ಆಣೆಕಟ್ಟು ನಿರ್ಮಾಣಗೊಂಡು ಜಲಾಶಯದಲ್ಲಿ ದೇವಾಲಯ ಮುಳುಗುವ ಆತಂಕ ಎದುರಾದಾಗ ಕೂಡಲಸಂಗಮ ಸಂರಕ್ಷಣೆ ಕುರಿತಾಗಿ ಅನೇಕ ಹೋರಾಟಗಳು ನಡೆದು ಈ ಬಗೆಯಲ್ಲಿ ಅನೇಕ ಚರ್ಚೆಗಳು ಮುನ್ನೆಲೆಗೆ ಬಂದವು. ದೇವಾಲಯದ ಸ್ಥಳಾಂತರ ಬಗ್ಗೆಯೂ ಚರ್ಚೆ ನಡೆದಿದ್ದವು. ಈ ಕುರಿತಾಗಿ ವಿಶ್ವನಾಥ ರೆಡ್ಡಿ ಮುದ್ನಾಳ ಸಮಿತಿ 1988ರಂದು ಸರ್ಕಾರಕ್ಕೆ ವರದಿ ನೀಡಿತು. ಅದೇ ವರ್ಷ ಸರ್ಕಾರ ಆದೇಶವನ್ನು ಹೊರಡಿಸಿತು. ಈ ಬಗೆಯಲ್ಲಿ ದೇವಾಲಯ ಹಾಗೂ ಸುತ್ತಲಿನ ಸಮುಚ್ಚಯವನ್ನು ಇದ್ದ ಸ್ಥಳದಲ್ಲಿಯೇ ಉಳಿಸಲು ಸಲಹೆಗಳು ಕೇಳಿಬಂದವು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಂಗಾರಪ್ಪನವರ, ಶ್ರೀ ವೀರಪ್ಪ ಮೋಯ್ಲಿಯವರ, ಶ್ರೀ ಎಚ್. ಡಿ. ದೇವೇಗೌಡರ ಅವಧಿಯಲ್ಲಿ ಅನೇಕ ಪೂರಕ ಚರ್ಚೆ, ಕಾರ್ಯಗಳು ನಡೆದವು. ಮುಂದೆ ಜೆ.ಎಚ್. ಪಟೇಲರ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಹಣ ಬಿಡುಗಡೆಗೊಂಡು ವಿವಿಧ ಸಭೆಗಳು, ತಂತ್ರಜ್ಞರ ಸಲಹೆಗಳ ಆಧಾರದಲ್ಲಿ ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ವತಿಯಿಂದ 1997ರ ಅವಧಿಗೆ ಅನೇಕ ಅಭಿವೃದ್ಧಿ ಕಾರ್ಯಗಳು ಚಾಲನೆಗೊಂಡು ಸಂಗಮೇಶ್ವರ ದೇವಾಲಯ, ಐಕ್ಯಮಂಟಪ ಸೇರಿದಂತೆ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ಪ್ರಾರಂಭವಾದವು.

ಮೂಲ ದೇವಾಲಯವನ್ನು ಸಂಪೂರ್ಣವಾಗಿ ಗಮನಿಸಿ ಪುರಾತತ್ವ ಇಲಾಖೆಯ ತಜ್ಞರು ಸೇರಿದಂತೆ ಅನೇಕ ಪರಿಣಿತರ ಸಹಾಯದಿಂದ ದೇವಾಲಯದ ಕಲ್ಲುಗಳಿಗೆ ಸಂಖ್ಯೆ, ಅಕ್ಷರ ಗುರುತುಗಳನ್ನು ಹಾಕಿ ದೇವಾಲಯವನ್ನು ಬಿಚ್ಚಿ ಅದೇ ಮೂಲ ಮಾದರಿಯಲ್ಲಿ ಪುನರ್ ನಿರ್ಮಾಣ ಮಾಡಲಾಯಿತು. ಅನೇಕ ಆಧುನಿಕ ಸೌಕರ್ಯಗಳನ್ನು ಬಳಸಿಕೊಂಡು ದೇವಸ್ಥಾನದ ಸಂಕೀರ್ಣದಲ್ಲಿ ಕಟ್ಟಡ, ಗೋಪುರ, ದೇವಾಲಯಗಳ ನಿರ್ಮಾಣ ನಡೆದವು. ಪ್ರಸ್ತುತ ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ನಿರ್ವಹಣೆಯಲ್ಲಿ ದೇವಾಲಯ ಹಾಗೂ ಅನೇಕ ಕಟ್ಟಡಗಳು ಇರಲಾಗಿವೆ. ಆರಂಭಿಕ ಅವಧಿಯಲ್ಲಿ ಗಮನಾರ್ಹ ಸೇವೆಗೈದ ಡಾ. ಶಿವಾನಂದ ಜಾಮದಾರ ಅವರನ್ನು ಮೊದಲ್ಗೊಂಡು ಇಲ್ಲಿಯ ತನಕ ನೇಮಕಗೊಳ್ಳುತ್ತಾ ಬಂದಿರುವ ಎಲ್ಲಾ ಆಯುಕ್ತರು ಈ ಕ್ಷೇತ್ರದ ಅಭಿವೃದ್ಧಿಯೊಟ್ಟಿಗೆ ದೇವಸ್ಥಾನದ ಸಂಕೀರ್ಣದ ಅನೇಕ ಕಾರ್ಯಗಳು ಯಶಸ್ವಿಯಾಗಿ ಜರುಗುವಂತೆ ಮಾಡಿದ್ದಾರೆ.

**ದೇವಾಲಯ ಸಂಕೀರ್ಣದ ಧಾರ್ಮಿಕ ಸ್ಥಳಗಳು:**

ಸಂಗಮೇಶ್ವರ ದೇವಾಲಯ, ಬಸವೇಶ್ವರ ಐಕ್ಯಮಂಟಪ, ಗಣಪತಿ ದೇವಾಲಯ, ಜಾತವೇದಮುನಿಗಳ ಗದ್ದುಗೆ, ಸಿದ್ಧೇಶ್ವರ ದೇವಾಲಯ, ನೂರೊಂದೇಶ್ವರ ದೇವಾಲಯ,

ತೇರಿನ ಬಸವಣ್ಣ ದೇವಾಲಯ, ಆಂಜನೇಯ ದೇವಸ್ಥಾನ, ರಾಘವೇಂದ್ರ ಶ್ರೀಗಳ ಶಾಖಾಮಠ, ಪಾದಗಟ್ಟೆ, ಘನಮಂಟೇಶ್ವರ ದೇವಾಲಯ, ರಥದ ಮನೆ, ಮುಖ್ಯ ಗೋಪುರ ಪ್ರವೇಶ ದ್ವಾರ, ಗಂಗೆಬಾಗಿಲು ಎಂಬ ಮಲಪ್ರಭಾ ನದಿ ಕಡೆಯ ಕಟ್ಟಡ ಮುಂತಾದ ಸ್ಥಳಗಳನ್ನು ಕಾಣುತ್ತೇವೆ.

ಬ್ರಾಹ್ಮಣ ಸಂಪ್ರದಾಯದ ರಾಘವೇಂದ್ರ ಮಠ: ಸಂಗಮೇಶ್ವರ ದೇವಾಲಯದ ಆವರಣದಲ್ಲಿ ಬ್ರಾಹ್ಮಣ ಸಂಪ್ರದಾಯದ ಪಾರಂಪರಿಕ ಮಠವೊಂದು ಇರಲಾಗಿದ್ದು, ಕೃಷ್ಣಾ ನದಿಗೆ ಅಭಿಮುಖವಾಗಿ ಈ ಮಠ ಇರಲಾಗಿದೆ. ನೂರೊಂದೇಶ್ವರ ದೇವಾಲಯದ ಹಿಂಭಾಗದಲ್ಲಿ ಈ ಮಠ ಕಂಡುಬರುತ್ತದೆ. ರಾಯರ ಬೃಂದಾವನ, ಆಂಜನೇಯ ಮೂರ್ತಿ ಸೇರಿದಂತೆ, ಭಗ್ನಗೊಂಡ ನಾರಾಯಣದೇವರ ಮೂರ್ತಿ ಈ ಮಠದ ಆವರಣದಲ್ಲಿ ಇರಲಾಗಿದೆ. ಈ ಮೊದಲು ಕೂಡಲಸಂಗಮದ ಬ್ರಾಹ್ಮಣ ಮನೆತನದವರೊಬ್ಬರು ಈ ಮಠದ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಾ ಬರುತ್ತಿದ್ದರು. ಪ್ರಸ್ತುತ ಮಂತ್ರಾಲಯದಿಂದ ನೇಮಕಗೊಂಡ ವ್ಯಕ್ತಿಗಳು ಮಠದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ. ಮಠದ ಆವರಣದಲ್ಲಿ ಬ್ರಾಹ್ಮಣ ಸಂಪ್ರದಾಯದ ಅನೇಕ ವಿಧಿವಿಧಾನಗಳು ನೆರವೇರುತ್ತಾ ಬಂದಿವೆ. ಸ್ಥಳೀಯ ಬ್ರಾಹ್ಮಣ ಜನರನ್ನು ಹೊರತುಪಡಿಸಿ ಉಳಿದ ಸಮುದಾಯದವರು ಈ ಮಠಕ್ಕೆ ಭೇಟಿ ಕೊಡುವುದು, ಧಾರ್ಮಿಕ ಕಾರ್ಯಗಳನ್ನು ನಡೆಸುವುದು ಕಂಡುಬರುವುದಿಲ್ಲ. ಬ್ರಾಹ್ಮಣ ಸಂಪ್ರದಾಯದ ಆಚರಣೆಗಳು ಕ್ಷೇತ್ರದಲ್ಲಿ ಉಳಿದುಕೊಂಡು ಬರುವಲ್ಲಿ ಈ ಮಠದ ಕಾರ್ಯಗಳು ಗಮನಾರ್ಹವಾಗಿವೆ. ನೇರವಾಗಿ ಮಠದ ವತಿಯಿಂದ ಕೂಡಲಸಂಗಮದ ಅಭಿವೃದ್ಧಿ ಕಾರ್ಯಗಳು ನಡೆಯುವುದು ಕಂಡುಬರುವುದಿಲ್ಲವಾದರೂ, ಧಾರ್ಮಿಕ ಸಾಮರಸ್ಯದ ನೆಲೆಯಲ್ಲಿ, ವೈವಿಧ್ಯತೆಯ ಆಚರಣೆಗಳ ನೆಲೆಯಲ್ಲಿ, ಸಾಂಸ್ಕೃತಿಕ ಸಾಮರಸ್ಯವನ್ನು ಪ್ರತಿಪಾದಿಸುವ ನೆಲೆಯಲ್ಲಿ ಈ ಮಠದ ಅಸ್ತಿತ್ವ ಗಮನಾರ್ಹವಾಗಿ ಕಂಡುಬರುತ್ತದೆ. ಅದೇ ರೀತಿ ಈ ಭಾಗದ ಅನೇಕ ಹಿರಿಯರು ಹೇಳುವಂತೆ ಕೂಡಲಸಂಗಮ ದೇವಾಲಯದ ಸಮೀಪದಲ್ಲಿ ಉತ್ತರಾಧಿ ಮಠ, ಶಂಕರ ಭಾರತಿ ಮಠವೊಂದು ಇತ್ತೆಂದು ಹೇಳುವರು. ಆದರೆ ಇಂದು ಆ ಹೆಸರಿನ ಮಠ ದೇವಾಲಯದ ಆವರಣದಲ್ಲಿ ಕಂಡುಬರುವುದಿಲ್ಲ. ಈ ನೆಲೆಯಲ್ಲಿ ಕೂಡಲಸಂಗಮದಲ್ಲಿ ಬ್ರಾಹ್ಮಣ ಸಮುದಾಯಕ್ಕಿಂತ, ಅನ್ಯ ಸಮುದಾಯದ ಪ್ರಭಾವ ಕಾಲಾಂತರದಲ್ಲಿ ಹೆಚ್ಚುತ್ತಾ ನಡೆದು ಅವುಗಳು ನೇಪಥ್ಯಕ್ಕೆ ಸರಿದಿರುವುದನ್ನು ಕಾಣುತ್ತೇವೆ. ಇಲ್ಲವೆ ಸ್ಥಳೀಯವಾಗಿ ಈ ಮಠಗಳ ಅಭಿವೃದ್ಧಿಯತ್ತ ಯಾರು ಗಮನಹರಿಸದಿರುವುದು ಸಹ ಇವುಗಳು ಇಂದು ಕಂಡುಬರದಿರಲು ಕಾರಣವಾಗಿವೆ.

**ಸಂಗಮೇಶ್ವರ ದೇವಾಲಯದ ಧಾರ್ಮಿಕ ಪೂಜೆ, ಸಂಪ್ರದಾಯಗಳು:**

ಕೂಡಲಸಂಗಮನಾಥನಿಗೆ ಶೈವ ಸಂಪ್ರದಾಯದ ಪಾರಂಪರಿಕ ಪೂಜೆಗಳು ಅನಾದಿ ಕಾಲದಿಂದಲೂ ನಡೆಯುತ್ತಾ ಬಂದಿವೆ. ನಿತ್ಯ ಐದು ಹೊತ್ತಿನ ಪೂಜೆಗಳು ನಡೆಯುತ್ತವೆ. ಪೂಜೆ ನೆರವೇರುವ ಕಾಲಕ್ಕೆ ಘಂಟಾನಾದದೊಂದಿಗೆ ಧೂಪಾರತಿಯನ್ನು ಹಿಡಿದು ದೇವಾಲಯದಲ್ಲಿ ಪ್ರದಕ್ಷಿಣೆ ಹಾಕುತ್ತಾರೆ. ನಸುಕಿನ ಜಾವ, ಮುಂಜಾನೆ, ಮಧ್ಯಾಹ್ನ, ಸಾಯಂಕಾಲ, ರಾತ್ರಿ ಹೀಗೆ ವಿವಿಧ ಸಂದರ್ಭಗಳಲ್ಲಿ ನಿತ್ಯ ಪೂಜೆ ಜರುಗುತ್ತವೆ. ಎರಡು ಹೊತ್ತು ಅನ್ನದ ನೈವೇದ್ಯವನ್ನು ಬೆಳ್ಳಿಯ ಹರಿವಾಣದಲ್ಲಿ ಇರಿಸಿ ನೈವೇದ್ಯ ಸಲ್ಲಿಸುವ ಸಂಪ್ರದಾಯ ಇರಲಾಗಿದೆ. ಜಾತ್ರೆಯ ಸಂದರ್ಭದ ಚೈತ್ರಮಾಸದಲ್ಲಿ ಒಂಬತ್ತು ದಿವಸ ಕಳಸ ಕನ್ನಡಿ ವೈಭವದ ಪಲ್ಲಕ್ಕಿ ಮೆರವಣಿಗೆಯ ಪೂಜೆ ನೆರವೇರುತ್ತವೆ. ರಥೋತ್ಸವ ಕಾರ್ಯಕ್ಕೆ ಬಾಗಲಕೋಟೆಯಿಂದ ಬರುವ ಬಂಗಾರದ ಕಳಸ, ಗುಳೇದಗುಡ್ಡದ ಉತ್ಸವ ಕಳಸಕ್ಕೆ ದೇವಾಲಯದ ವತಿಯಿಂದ ವಿಶೇಷ ಪೂಜೆ ನೆರವೇರುತ್ತವೆ. ಶ್ರಾವಣ ಮಾಸ, ಕಾರ್ತಿಕ ಮಾಸ, ಯುಗಾದಿ, ಬಸವಜಯಂತಿ ಸೇರಿದಂತೆ

ಕೆಲವು ವಿಶೇಷ ಸಂದರ್ಭಗಳಲ್ಲಿ ಸಂಗಮನಾಥನಿಗೆ ವಿಶೇಷ ಅಲಂಕಾರ, ಪೂಜಾ ಕಾರ್ಯಗಳು ಜರುಗುತ್ತವೆ. ದೀಪಾಲಂಕಾರ, ಎಲೆಪೂಜೆ, ಬುತ್ತಿಪೂಜೆ ವಿಶೇಷವಾಗಿ ಕಂಡುಬರುತ್ತವೆ. ನಿತ್ಯ ಅಭಿಷೇಕದೊಂದಿಗೆ ವಿವಿಧ ಸರದಿಯಲ್ಲಿ ಭಕ್ತರಿಗೆ ಪಂಚಾಮೃತ, ರುದ್ರಾಭಿಷೇಕ ಮಾಡಿಸಲು ಅವಕಾಶ ಇರಲಾಗಿವೆ. ಮದುವೆ, ದೀರ್ಘದಂಡ ನಮಸ್ಕಾರ, ಜವಳ ಕಾರ್ಯದಂತಹ ಶುಭಕಾರ್ಯಗಳು ದೇವಾಲಯದ ಆವರಣದಲ್ಲಿ ಜರುಗುತ್ತವೆ. ಶಿವರಾತ್ರಿ, ಶ್ರಾವಣ, ಜಾತ್ರೆಯ ಅಂಗವಾಗಿ ಕೂಡಲಸಂಗಮ ಅಭಿವೃದ್ಧಿ ಮಂಡಳಿ ವತಿಯಿಂದ ದೇವಾಲಯದ ಆವರಣದಲ್ಲಿ ಪ್ರವಚನ, ಪುರಾಣ, ವಚನಗಾಯನ, ಭಜನಾ ಕಾರ್ಯಕ್ರಮಗಳು, ವಿಶೇಷ ಧಾರ್ಮಿಕ ಉಪನ್ಯಾಸಗಳು ಸೇರಿದಂತೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ಸ್ಥಳೀಯ ಅನೇಕ ಸಾಂಪ್ರದಾಯಿಕ ಕಾರ್ಯಕ್ರಮಗಳು ಸಹ ದೇವಾಲಯದಲ್ಲಿ ವಿವಿಧ ದಿನಗಳಂದು ಜರುಗುತ್ತಾ ಬರಲಾಗಿದ್ದು, ಈ ಭಾಗದ ವಿಶಿಷ್ಟ ಧಾರ್ಮಿಕ ಸಂಸ್ಕೃತಿಯ ಅನಾವರಣವನ್ನು ಸಂಗಮೇಶ್ವರ ದೇವಾಲಯದ ಹಿನ್ನೆಲೆಯಲ್ಲಿ ಕಾಣುತ್ತೇವೆ.

ಈ ಹಿನ್ನೆಲೆಯಲ್ಲಿ ಪ್ರಾಚೀನ ಚರಿತ್ರೆಯನ್ನು, ಐತಿಹ್ಯವನ್ನು ಒಳಗೊಂಡ ಕೂಡಲಸಂಗಮ ದೇವಾಲಯವು ನಿತ್ಯ ಸಾವಿರಾರು ಭಕ್ತ ಜನತೆ ಪುಣ್ಯದರ್ಶನ ಪಡೆಯುವ ಧಾರ್ಮಿಕ ತಾಣವಾಗಿದ್ದು, ಇಲ್ಲಿ ಜರುಗುವ ಅನೇಕ ಕಾರ್ಯಕ್ರಮಗಳು ಈ ಭಾಗದ ವಿಶಿಷ್ಟ ಧಾರ್ಮಿಕ ಸಂಸ್ಕೃತಿಯನ್ನು ಪ್ರತಿನಿಧಿಸುವಂತಹದ್ದಾಗಿದೆ. ದೇಶದ ನಾನಾ ಭಾಗಗಳಿಂದ ಆಗಮಿಸಿ ಕ್ಷೇತ್ರದ ಆರಾಧ್ಯ ದೈವ ಸಂಗಮನಾಥನ ದರ್ಶನ ಪಡೆದುಕೊಂಡು ಹೋಗುವ ಭಕ್ತರು ಈ ಕ್ಷೇತ್ರದ ಆಧ್ಯಾತ್ಮಿಕ ಪರಿಸರವನ್ನು, ಪ್ರಾಕೃತಿಕ ತ್ರಿವೇಣಿ ನದಿಗಳ ಸಂಗಮವನ್ನು ಕಂಡು ಮಹದಾನಂದವನ್ನು ಹೊಂದುತ್ತಾರೆ. ಪುನರ್ ನಿರ್ಮಾಣಗೊಂಡ ಕೂಡಲಸಂಗಮನಾಥನ ದೇವಾಲಯದ ಚಿತ್ರಣ ನಾಡಿನ ಧಾರ್ಮಿಕ ಕ್ಷೇತ್ರಗಳ ಸಾಲಿನಲ್ಲಿ ವಿಶಿಷ್ಟವಾಗಿ ಕಂಗೊಳಿಸುವಂತಹದ್ದಾಗಿದೆ.

**ಸಂಗಮನಾಥನ ದೇವಾಲಯದ ಆವರಣದಲ್ಲಿ ಪತ್ತೆಯಾದ ಘಂಟೆ:**

ಘಂಟೆಯನ್ನು ದೇವಾಲಯದ ಮುಂಭಾಗದಲ್ಲಿ ಕಟ್ಟುವ ವಾಡಿಕೆ ಹಿಂದಿನಿಂದಲೂ ಇರಲಾಗಿದ್ದು, ಇದಕ್ಕೆ ಧಾರ್ಮಿಕ ಹಾಗೂ ವೈಜ್ಞಾನಿಕ ಕಾರಣಗಳು ಇರಲಾಗಿವೆ. ಕೂಡಲಸಂಗಮದಲ್ಲಿ ಸಂಗಮೇಶ್ವರ ದೇವಾಲಯಕ್ಕೆ ಸಂಬಂಧಪಟ್ಟ 2 ದೊಡ್ಡ ಘಂಟೆಗಳು ಇರಲಾಗಿದ್ದವು ಎಂದು ಅನೇಕ ಹಿರಿಯರು ಹೇಳುತ್ತಾ ಬಂದಿದ್ದರು. ಆದರೆ ಅವು ಬಿರುಕುಗೊಂಡು ಭಗ್ನಗೊಂಡ ಕಾರಣ ಬಳಸದೆ ಗೋದಾಮಿನಲ್ಲಿ ಇಡಲಾಗಿದ್ದು ಇವುಗಳು ವೀಕ್ಷಣೆ ಹಾಗೂ ಬಳಕೆಗೆ ಅಲಭ್ಯವಾಗಿದ್ದವು. ಕಳೆದ ಕೆಲವು ವರ್ಷಗಳ ಹಿಂದೆ ಕೆಳದಿ ಅರಸರು ದಾನ ನೀಡಿದ ಘಂಟೆಯೊಂದು ಪತ್ತೆಯಾಗಿತ್ತು. ಈ ಘಂಟೆಯು ಕೆಳದಿಯ ಅರಸ ಬಸವಪ್ಪ ನಾಯಕನ ಪುತ್ರ ವೀರಭದ್ರನಾಯಕ ದತ್ತಿಕೊಟ್ಟಿರುವ ವಿವರಣೆ ಕಾಣುತ್ತೇವೆ. ಇದೇ ತರಹದ ಮತ್ತೊಂದು ಘಂಟೆಯನ್ನು ಇತ್ತೀಚೆಗೆ ಈ ಘಂಟೆಯನ್ನು ವೀಕ್ಷಿಸಲು ಹೋದಾಗ ಅದೇ ಸ್ಥಳದಲ್ಲಿ ಮತ್ತೊಂದು ಬೃಹತ್ ಘಂಟೆ ದೊರತಿದೆ. ಮಿಶ್ರಲೋಹದಿಂದ ಮಾಡಿದ ಈ ಘಂಟೆ ಈ ಹಿಂದೆ ಸಿಕ್ಕ ಘಂಟೆಗಿಂತ ಎತ್ತರ ಹಾಗೂ ವಿಶಾಲವಾಗಿದೆ.

**ವ್ಯಕ್ತಿಯ ಹೆಸರಿನ ಉಲ್ಲೇಖ:**

ಕೂಡಲಸಂಗಮ ಅಭಿವೃದ್ಧಿ ಮಂಡಳಿ ಸಿಬ್ಬಂದಿ ನೆರವಿನೊಂದಿಗೆ ಈ ಘಂಟೆಯನ್ನು ಹೊರತೆಗೆಯಿಸಿ ಅದನ್ನು ಶುಚಿಗೊಳಿಸಿ ಓದಿದಾಗ ಘಂಟೆ ಮಾಡಿಸಿದವರ ಹೆಸರು ಕಂಡುಬಂದಿದೆ. ಘಂಟೆಯ ಹೊರ ಮೇಲ್ಮೈ ಭಾಗದ ನಡುವೆ ಒಂದು ಸಾಲಿನಲ್ಲಿ

"ಬಸವಂತರಾಯ್ ಮಾಡಿಸಿದ ಘಂಟೆ" ಎಂಬ ಅಕ್ಷರಗಳು ಇರಲಾಗಿವೆ. ಕಾಲಮಾನ, ವ್ಯಕ್ತಿಯ ಸ್ಥಳ, ಮನೆತನದ ಹೆಸರು ಲಭ್ಯವಾಗಿಲ್ಲ. ಸ್ಥಳೀಯ ಆಡಳಿತದ ಮುಖ್ಯಸ್ಥ ಇಲ್ಲವೆ ಈ ಹಿಂದೆ ದೊರೆತ ಕೆಳದಿ ಅರಸರ ಘಂಟೆಯ ಆಧಾರದಲ್ಲಿ ಇದು ಕೂಡ ಅವರ ಕಾಲದ್ದು ಎಂದು ಊಹಿಸಬಹುದಾಗಿದೆ. ಅಕ್ಷರಗಳು ಮಧ್ಯಮ ಗಾತ್ರದಲ್ಲಿರಲಾಗಿದ್ದು ಸರಳವಾಗಿ ಓದಲು ಬರುತ್ತವೆ. ನಿಖರವಾದ ಮಾಹಿತಿ ತಿಳಿಯಲು ಹಿರಿಯ ವಿದ್ವಾಂಸರ ಭೇಟಿ ನೀಡಿ ಇದರ ಕಾಲಮಾನ, ಮಾಡಿಸಿಕೊಟ್ಟ ವ್ಯಕ್ತಿಯ ಬಗ್ಗೆ ಬೆಳಕು ಚೆಲ್ಲುವ ಅವಶ್ಯಕತೆ ಇರಲಾಗಿದೆ.

**ಘಂಟೆಯ ಸ್ವರೂಪ:**

ಘಂಟೆಯು ತಾಮ್ರ, ಕಚು ಇತ್ಯಾದಿ ಲೋಹ ಬಳಸಿ ನಿರ್ಮಿಸಿದ ಘಂಟೆಯಾಗಿದೆ. ಮೇಲ್ಭಾಗದಲ್ಲಿ ಸರಪಳಿ ಹಾಕಿ ಕಟ್ಟಲು ಬೇಕಾದ ದೊಡ್ಡ ರಂಧ್ರವಿರಲಾಗಿದೆ. ಒಟ್ಟು ನಾಲ್ಕು ಹಂತಗಳಲ್ಲಿ ಚಿತ್ತಾರ ಬಿಡಿಸಲಾಗಿದ್ದು ಆಕರ್ಷಣೆಯನ್ನು ಒದಗಿಸಿವೆ. ರಂಧ್ರಕ್ಕೆ ಬಳಸಿದ ಕಬ್ಬಿಣದ ಬಳೆ ಇತ್ತೀಚಿನದಾಗಿದೆ. ಸೂಕ್ತ ನಿರ್ವಹಣೆ, ಕಾಳಜಿ ವಹಿಸದ ಕಾರಣಕ್ಕೆ ಕೆಳಭಾಗದಲ್ಲಿ ಒಡೆದುಹೋಗಿದೆ. ಘಂಟೆಯ ನಾಲಿಗೆ ಭಾಗ ಇಲ್ಲವಾಗಿದೆ. ಇದು ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಇರಲಾದ ಅತಿ ದೊಡ್ಡ ಘಂಟೆಯಾಗಿದೆ.

**ಸಂಗಮನಾಥನ ದೇಗುಲದ ಘಂಟೆ:**

ಈ ಘಂಟೆಯನ್ನು ಕೂಡಲಸಂಗಮೇಶ್ವರ ದೇವಾಲಯದ ಮುಂಭಾಗದ ಬಾಗಿಲಿನ ಸಮೀಪದ ಮೇಲ್ಭಾಗದಲ್ಲಿ ಕಟ್ಟುತ್ತಿದ್ದರು. ಹಿರಿಯರು ಹೇಳುವ ಪ್ರಕಾರ ಇದನ್ನು ಬಾರಿಸಿದಾಗ ಇದರ ನಾದವು ಸುತ್ತಮುತ್ತಲಿನ ಕೆಲವು ಊರುಗಳಿಗೂ ಕೇಳುತ್ತಿತ್ತು. ದೇವಾಲಯವನ್ನು ಪ್ರವೇಶಿಸುವ ಸಂದರ್ಭದಲ್ಲಿ ಇದನ್ನು ಬಾರಿಸಿ ಒಳಹೋಗುವ ವಾಡಿಕೆ ಇರಲಾಗಿತ್ತು. ಈ ಬಗೆಯ ಘಂಟೆಯ ಕುರಿತಾದ ಉಲ್ಲೇಖ, ದಾನಿಯ ಕುರಿತಾದ ವಿವರಣೆ ಕ್ಷೇತ್ರಕ್ಕೆ ಸಂಬಂಧಪಟ್ಟ ಸಾಹಿತ್ಯಿಕ ಕೃತಿಗಳಲ್ಲಿ ಇಲ್ಲವಾಗಿದ್ದು, ಅನೇಕರು ಈ ಘಂಟೆ ನದಿಯಲ್ಲಿ ಕಳೆದುಹೋಗಿತ್ತೆಂದು ನಂಬಿದ್ದರು. ಇತ್ತೀಚೆಗೆ ದೊರೆತಿದ್ದು ಧಾರ್ಮಿಕ ಭಕ್ತಿ ಭಾವನೆ ಉಳ್ಳವರಿಗೆ ಸಂತಸವನ್ನು ತಂದಿದೆ.

**ಸಂಶೋಧನೆಯ ಅಗತ್ಯ:**

ಈ ಘಂಟೆಯ ಮೇಲಿನ ಹೆಸರಿನ ವ್ಯಕ್ತಿಯ ಬಗ್ಗೆ, ಆತನ ವಂಶಜರ ಬಗ್ಗೆ ಅಧ್ಯಯನಗಳು ನಡೆದರೆ ಕ್ಷೇತ್ರದ ಚರಿತ್ರೆಯ ಅಧ್ಯಯನಕ್ಕೆ ಹೊಸ ಅಂಶಗಳು ಲಭ್ಯವಾಗುತ್ತವೆ. ಇಲ್ಲಿಯವರೆಗೂ ದೇವಾಲಯ ನಿರ್ಮಾಣ ಮಾಡಿದ ವ್ಯಕ್ತಿ ದ್ಯಾವನಾಯಕನೆಂದು ಅನೇಕರು ಹೇಳುತ್ತಿದ್ದು, ಈ ಘಂಟೆಯನ್ನು ಮಾಡಿಸಿದ ವ್ಯಕ್ತಿಯ ಬಗ್ಗೆ ನಿಖರ ಮಾಹಿತಿ ದೊರೆತರೆ ಇತನ ಧಾರ್ಮಿಕ ಕೊಡುಗೆಗಳ ಬಗ್ಗೆ ಮತ್ತಷ್ಟು ತಿಳಿಯಲು ಸಹಾಯಕವಾಗುತ್ತದೆ. ಸಂಗಮೇಶ್ವರ ದೇವಾಲಯ ಅನೇಕ ಹಂತಗಳಲ್ಲಿ ಜೀರ್ಣೋದ್ಧಾರಗೊಂಡಿದ್ದು, ಈ ನೆಲೆಯಲ್ಲಿ ಇತನ ಪಾತ್ರ ಇರುವ ಕುರಿತು ಹೆಚ್ಚಿನ ಅಧ್ಯಯನಗಳು ನಡೆಯಬೇಕಿವೆ. ಸ್ಥಳೀಯವಾಗಿ ಬಸವಂತರಾಯ್ ಎಂಬ ಹೆಸರಿನ ಹಿರಿಯರು ಕಂಡುಬರದೇ ಇದ್ದು, ಗ್ರಾಮದ ಮುಖಂಡರ ಮನೆತನಗಳ ಯಾವ ಹಿರಿಯರ ಹೆಸರು ಬಸವಂತರಾಯ್ ಎಂದು ಇಲ್ಲ. ಬಹುತೇಕ ಇವರು ಹೊರಗಿನವರಾಗಿರುವ ಸಾಧ್ಯತೆಗಳು ಇರಲಾಗಿದ್ದು, ವಿದ್ವಾಂಸರು, ಸಂಶೋಧಕರು ಘಂಟೆ ಹಾಗೂ ಮಾಡಿಸಿಕೊಟ್ಟ ವ್ಯಕ್ತಿಯ ಕುರಿತಾದ ಸ್ಪಷ್ಟ ಅಧ್ಯಯನ ನಡೆಸಬೇಕಾದ ಅನಿವಾರ್ಯತೆ ಇರಲಾಗಿದೆ. ಪುರಾತತ್ವ ಇಲಾಖೆ ಹಾಗೂ ಕೂಡಲಸಂಗಮ ಅಭಿವೃದ್ಧಿ ಮಂಡಳಿಯವರು ಈ ಬಗ್ಗೆ ಗಮನ ಹರಿಸಬೇಕಾಗಿದೆ.

## ಪರಾಮರ್ಶನ ಗ್ರಂಥಗಳು:


1. ಜಯಶ್ರೀ ದಂಡೆ, ವೀರಣ್ಣ ದಂಡೆ; 2012, 12ನೇ ಶತಮಾನದ ಸ್ಮಾರಕಗಳು (ಬಸವಕಲ್ಯಾಣದಿಂದ ಕೂಡಲಸಂಗಮದವರೆಗೆ), ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
2. ಜ.ಚ.ನಿ; 1974, ಕೂಡಲಕ್ಷೇತ್ರ, ಪುರಾಣಿಕ ಪ್ರಿಂಟಿಂಗ್ ಪ್ರೆಸ್, ಬಾಗಲಕೋಟೆ.
3. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು; 1988, ಕೂಡಲಸಂಗಮದ ಅಳಿವು ಉಳಿವು, ತರಳಬಾಳು ಪ್ರಕಾಶನ, ಸಿರಿಗೆರೆ.
4. ಹೀರೆಮಠ ಜಿ.ಬಿ; ಸುಕ್ಷೇತ್ರ ಕೂಡಲಸಂಗಮ ಸಮಗ್ರ ದರ್ಶನ, ಪಿ.ಸಿ. ಶಾಬಾದಿಮಠ ಬುಕ್ ಡಿಪೋ ಪಬ್ಲಿಶರ್ಸ್, ಗದಗ.
5. ಮಹೇಶ ತಿಪ್ಪಶೆಟ್ಟಿ; 2016, ಕೂಡಲಸಂಗಮ ಸಮಾಜೋ-ಧಾರ್ಮಿಕ ಅಧ್ಯಯನ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.
6. ಶ್ರೀಧರ ಗೌಡರ; 2021, ನುಡಿನೆರಳು (ಪತ್ರಿಕಾ ಕಿರು ಲೇಖನಗಳು), ಬಸವ ಪ್ರಕಾಶನ, ಕೂಡಲಸಂಗಮ.
7. ಎ.ಎಂ. ಗೊರಚಿಕ್ಕನವರ; 2012, ಶ್ರೀ ಕೂಡಲಸಂಗಮೇಶ್ವರನ ಬಂಗಾರದ ಕಳಸ, ಸಂಗಮ ಪ್ರಕಾಶನ, ಕೂಡಲಸಂಗಮ.
8. ಎಸ್.ಎಂ. ಜಾಮದಾರ; 2014, ಕಲ್ಯಾಣ ಪುನರುತ್ಥಾನ (ಶರಣ ಕ್ಷೇತ್ರಾಭಿವೃದ್ಧಿ), ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.
9. ಗೋಡಿಹಾಳ ಕಾಂತೇಶರೆಡ್ಡಿ ರಾಮರೆಡ್ಡಿ; 2019, ಕೂಡಲಸಂಗಮ: ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಾದರಪಡಿಸಿದ ಮಹಾಪ್ರಬಂಧ (ಅಪ್ರಕಟಿತ).
10. ಮ.ನಿ.ಪ್ರ. ಹಿರಿಶಾಂತವೀರ ಮಹಾಸ್ವಾಮಿಗಳು; 2016, ಗಂಗಾಂಬಿಕೆ-ನೀಲಾಂಬಿಕೆ ಒಂದು ಅಧ್ಯಯನ, ಪ್ರಭುದೇವ ಜನಕಲ್ಯಾಣ ಸಂಸ್ಥೆ, ವಿರಕ್ತಮಠ, ಸಂಡೂರು.
11. ಮಹಾಮನೆ, ಲಿಂಗಾಯತ ದರ್ಶನ, ಶರಣ ಮಾರ್ಗ ಮಾಸಿಕ ಪತ್ರಿಕೆಗಳಲ್ಲಿ ಪ್ರಕಟಗೊಂಡ ಸಂಶೋಧನಾ ಲೇಖನ. "ಕೂಡಲಸಂಗಮ ಹಾಗೂ ಶರಣರು", ದಿನಾಂಕ: ಫೆಬ್ರವರಿ 2020 ಹಾಗೂ ಮಾರ್ಚ್ 2020.


## ಸಂದರ್ಶನ / ವಕ್ತೃ ವಿವರ:

1. ರಾಮರೆಡ್ಡಿ ಮಾ. ಸರದೇಸಾಯಿ, ಅಮರಾವತಿ – ಅಮರಾವತಿ ದೇಸ್ಗತಿ ಮನೆತನದ ಹಿರಿಯರು.
2. ರವೀಂದ್ರ ಸಂ. ಸರದೇಸಾಯಿ, ರಕ್ಕಸಗಿ (ಬಾಗಲಕೋಟೆ) – ರಕ್ಕಸಗಿ ದೇಸ್ಗತಿ ಮನೆತನದ ಹಿರಿಯರು.
3. ದೀಲಿಪಕುಮಾರ ಜಾಹಗೀರದಾರ, ಗಂಜಿಹಾಳ – ಗಂಜಿಹಾಳ ಜಾಹಗೀರದಾರ ಮನೆತನದ ಹಿರಿಯರು.
4. ಡಾ. ಶರಣು ಎಲ್. ಪಾಟೀಲ, ಕೂಡಲಸಂಗಮ – ಪ್ರಾಧ್ಯಾಪಕರು.
5. ಶ್ರೀ ಜಿ.ಜಿ. ಪಾಟೀಲ, ಕೂಡಲಸಂಗಮ – ಚೇರ್ಮನ್ನರು, ಶ್ರೀ ಸಂಗಮೇಶ್ವರ ಉಚಿತ ಪ್ರಸಾದ ನಿಲಯ.
6. ಅನಂತ ರಾ. ದೇಶಪಾಂಡೆ, ಕೂಡಲಸಂಗಮ – ಕೂಡಲಸಂಗಮ ನಾಡೀಗೇರ ಮನೆತನದ ಸದಸ್ಯರು.
7. ನಾಗರಾಜ ನಾಡಗೌಡ, ಹುನಗುಂದ (ಚಿತ್ತವಾಡಗಿ) – ನಿವೃತ್ತ ಉಪನ್ಯಾಸಕರು.
8. ಬಸವರಾಜ ಶಿರೂರ, ನಂದನೂರ (ಬಿಸನಾಳ ಕೊಪ್ಪ) – ನಿವೃತ್ತ ರೇಷ್ಮೆ ಇಲಾಖೆ ಅಧಿಕಾರಿಗಳು.
9. ಅಮರಯ್ಯ ಬಸಯ್ಯ ಕೋಟೂರ, ಕೂಡಲಸಂಗಮ – ಹಿರಿಯ ಅರ್ಚಕರು.
10. ಜಿ.ಜಿ. ಬಾಗೇವಾಡಿ, ಕೂಡಲಸಂಗಮ – ಟ್ರಸ್ಟಿಗಳು, ಪಂಚಮಸಾಲಿ ಪೀಠ ಕೂಡಲಸಂಗಮ.
11. ಮಲ್ಲಯ್ಯ ಸೂಳಿಬಾವಿ, ಕೂಡಲಸಂಗಮ – ಅರ್ಚಕರು.

12. ಮಲ್ಲಪ್ಪ ಗೊರಚಿಕ್ಕನವರ, ಕೂಡಲಸಂಗಮ – ಕಳಸದ ಸೇವಾಕರ್ತರು.
13. ರುದ್ರಪ್ಪ ಚೆ. ಬೂದೂರಿ, ಕೂಡಲಸಂಗಮ – ಕಳಸದ ಬಾಬುದಾರರು.
14. ಶ್ರೀಧರ ಗೌಡರ, ಕೂಡಲಸಂಗಮ – ಪತ್ರಕರ್ತರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.